# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್


ಆಡಳಿತ ಕಛೇರಿ/ಪ್ರಧಾನ ಕಛೇರಿ

ನಂ. 30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು – 560 011

ದೂರವಾಣಿ : 26632783, 26633566

Fax : 080-26656820, Email : bcbho34@bsnl.in Website : www.bcbbank.co


## 46ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ 2019-2020ನೇ ಸಾಲಿನ 46ನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು **ದಿನಾಂಕ 20-12-2020ನೇ ಭಾನುವಾರ ಬೆಳಿಗ್ಗೆ 11 ಘಂಟೆಗೆ ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**, ನಂ. 30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು – 560 011 ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ॥ ಎಂ. ಸಿ. ಜಗತ್ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರದ ಆದೇಶದಂತೆ ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮೂಲಕ ಕೆಳಕಂಡ ಕಾರ್ಯಸೂಚಿಯನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

### ಕಾರ್ಯಸೂಚಿ

1. ಸರ್ವಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು.
2. ದಿನಾಂಕ 22-09-2019ರಂದು ನಡೆದ ಬ್ಯಾಂಕಿನ 45ನೇ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
3. 2019-20ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ.
4. 2019-20ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ.
5. 2019-20ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.
6. 2019-20ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು.
7. 2021-22ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು.
8. 2020-21ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
9. ಕರ್ನಾಟಕ ಸಹಕಾರ ಕಾಯ್ದೆ ನಿಯಮಗಳ ಅನುಸಾರವಾಗಿ ತಿದ್ದುಪಡಿಯಾಗಿರುವ ಪ್ರಕಾರ ಬ್ಯಾಂಕಿನ ಬೈಲಾ ತಿದ್ದುಪಡಿಗಳನ್ನು ಅನುಮೋದಿಸುವುದು.
10. 2020-21ನೇ ಸಾಲಿನ ಕಾರ್ಯಕ್ರಮದ ಪರಿಗಣನೆ.
11. ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ.
12. ನಿರ್ದೇಶಕರು ಮತ್ತು ಅವರ ಸಂಬಂಧಿಗಳ ಸಾಲಗಳ ಬಗ್ಗೆ ಪರಿಶೀಲನೆ.
13. ಅಧ್ಯಕ್ಷರ ಅಪ್ಪಣೆ ಮೇರೆಗೆ– ಇತರೆ ವಿಷಯಗಳು

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಅಮೃತ ಡಿ. ಎ.
ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 1-12-2020

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಜಯನಗರ, ಬೆಂಗಳೂರು – 560 011

## ಸೂಚನೆಗಳು :

1. ಕೋವಿಡ್ – 19 ಹರಡುವಿಕೆ ತಡೆಗಟ್ಟಲು ಕರ್ನಾಟಕ ಸರ್ಕಾರವು ಆಗಿಂದಾಗ್ಗೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಕೆಲವು ಸಮಯದವರೆಗೆ ಎಲ್ಲಾ ಸಂಘ-ಸಂಸ್ಥೆಗಳು ವಹಿವಾಟುಗಳನ್ನು ಮತ್ತು ಸಾರ್ವಜನಿಕ ಚಟುವಟಿಕೆಗಳನ್ನು ಸಹ ಸೀಮಿತಗೊಳಿಸಿರುವುದು ತಮಗೆಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಅದರ ಪರಿಣಾಮವಾಗಿ 2020ರ ವರ್ಷದಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಗಳನ್ನು ನಡೆಸುವ ವಿಚಾರವಾಗಿ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯು ದಿನಾಂಕ : 21-10-2020ರಂದು ಆದೇಶವನ್ನು ಹೊರಡಿಸಿ ಅದರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 1997ರ ಪ್ರಕಾರ ಮತ್ತು ಕೋವಿಡ್-19 ನಿರ್ವಹಣೆಗೆ ಹೊರಡಿಸಿದ ರಾಷ್ಟ್ರೀಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು 2020 ರ ಅವಧಿಗೆ ಮಾತ್ರ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮೂಲಕ ನಡೆಸಲು ಅನುಮತಿ ನೀಡಲಾಗಿದೆ ಹಾಗಾಗಿ ಮಾನ್ಯ ಸದಸ್ಯರು ವಿಡಿಯೋ ಕಾನ್ಫರೆನ್ಸ್ ಮೂಲಕ ಬ್ಯಾಂಕಿನ ಸರ್ವಸದಸ್ಯರ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳಿಗೆ ಅನುಮೋದನೆ ನೀಡಬೇಕೆಂದು ಕೋರುತ್ತೇವೆ.

2. ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮುಖಾಂತರ ಭಾಗವಹಿಸಲು Meeting Link: www.dreamswebinar.com/bcdbank ಗೆ ಸಭೆಯ ದಿನದಂದು ಲಾಗಿನ್ ಆಗಿ ತಮ್ಮ ಹೆಸರು ಮತ್ತು ಸದಸ್ಯತ್ವದ ಸಂಖ್ಯೆಯನ್ನು ನಮೂದಿಸಬೇಕು. ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮೂಲಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿದ ಸದಸ್ಯರುಗಳನ್ನು ವಾರ್ಷಿಕ ಮಹಾಸಭೆಯ ಹಾಜರಾತಿಗೆ ಪರಿಗಣಿಸಲಾಗುವುದು.

3. ವಿಳಾಸ ಬದಲಾವಣೆ ಇದ್ದಲ್ಲಿ ತಕ್ಷಣ ಬ್ಯಾಂಕಿಗೆ ತಮ್ಮ ಹೊಸ ವಿಳಾಸವನ್ನೊಳಗೊಂಡ ಇತ್ತೀಚಿನ ಅಂಗೀಕೃತ ಪುರಾವೆಯನ್ನು ಅರ್ಜಿಯೊಂದಿಗೆ ಸಲ್ಲಿಸಿ ವಿಳಾಸ ಬದಲಾಯಿಸಿಕೊಳ್ಳತಕ್ಕದ್ದು.

4. 2019-20ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಅದರ ಅನುವರ್ತನೆಯನ್ನು ಪ್ರತ್ಯೇಕವಾಗಿ ಮುದ್ರಿಸಿದ್ದು, ಇದರ ಪ್ರತಿಯನ್ನು ಸದಸ್ಯರು ದಿನಾಂಕ : 14-12-2020 ರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಮತ್ತು ಎಲ್ಲಾ ಶಾಖೆಗಳಲ್ಲಿ ಪಡೆಯಬಹುದು.

5. ಬ್ಯಾಂಕಿನ Website:www.bcbbank.co ರಲ್ಲಿ ಸರ್ವಸದಸ್ಯರ ಸಭೆಯ ಸೂಚನಾ ಪತ್ರ ಮತ್ತು ವಾರ್ಷಿಕ ವರದಿ ಮತ್ತು ಆಡಿಟ್ ವರದಿಯನ್ನು ವೀಕ್ಷಿಸಬಹುದು.

6. ತಮ್ಮ ಸೂಚನೆ/ಸಲಹೆಗಳನ್ನು ಸಭೆಯಲ್ಲಿ ಮಂಡಿಸಲು ಇಚ್ಛಿಸುವ ಸುಸ್ತಿದಾರರಲ್ಲದ ಸದಸ್ಯರು ಸಭೆಗೆ 7 ದಿನಗಳ ಮುಂಚೆ ಲಿಖಿತ ಮೂಲಕ ಕಾರ್ಯದರ್ಶಿಯವರಿಗೆ ತಲುಪಿಸಬೇಕು. ಅದರಂತೆ ಯಾವುದಾದರೂ ಕೋರಿಕೆ ಸಲ್ಲಿಸಿದ್ದಲ್ಲಿ ಅದನ್ನು ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮುಖಾಂತರ ನಡೆಯುವ ಸಭೆಯಲ್ಲಿ ಚರ್ಚಿಸಲಾಗುವುದು.

7. ಬ್ಯಾಂಕಿನ ಕಾರ್ಯವ್ಯಾಪ್ತಿಯ ಹೊರಗೆ ವಾಸಿಸುತ್ತಿರುವಂತಹ ಸದಸ್ಯರುಗಳು ಯಾವುದೇ ರೀತಿಯ ಸಾಲ ಸೌಲಭ್ಯಗಳನ್ನು ಬ್ಯಾಂಕಿನಿಂದ ಪಡೆಯಲು ಅರ್ಹರಾಗಿರುವುದಿಲ್ಲ. ಆದುದರಿಂದ ಅಂತಹ ಸದಸ್ಯರುಗಳು ತಮ್ಮ ಸದಸ್ಯತ್ವವನ್ನು ತಕ್ಷಣ ರದ್ದುಗೊಳಿಸಿಕೊಳ್ಳಲು ಕೋರಲಾಗಿದೆ.

8. ಷೇರು ಸರ್ಟಿಫಿಕೇಟನ್ನು ಪಡೆಯದೇ ಇರುವ ಸದಸ್ಯರು ಆಡಳಿತ ಕಛೇರಿಯಲ್ಲಿ ಷೇರು ಸರ್ಟಿಫಿಕೇಟನ್ನು ಪಡೆಯಬೇಕಾಗಿ ವಿನಂತಿ.

9. ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಪ್ರತಿಭಾವಂತ ಮಕ್ಕಳಿಗೆ ಉತ್ತೇಜನ ಧನ ಸಹಾಯ ನೀಡುವುದಕ್ಕೆ ಸಂಬಂಧಿಸಿದಂತೆ, ಏಪ್ರಿಲ್–ಮೇ 2019–20ನೇ ಸಾಲಿನಲ್ಲಿ ನಡೆದ ಪರೀಕ್ಷೆಯಲ್ಲಿ ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಮಕ್ಕಳು ಪಿಯುಸಿ 2ನೇ ವರ್ಷದ ಪರೀಕ್ಷೆಯಲ್ಲಿ ಮತ್ತು ಪದವಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ.85ಕ್ಕಿಂತ ಹೆಚ್ಚಿಗೆ ಅಂಕ ಪಡೆದಂತಹವರು ಹಾಗೂ ರಾಷ್ಟ್ರ ಮಟ್ಟದ ಕ್ರೀಡಾ ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಈ ಉತ್ತೇಜನ ಪಡೆಯಲು ಅರ್ಹರಾಗಿದ್ದು, ವಾರ್ಷಿಕ ಮಹಾಸಭೆಯ ದಿನಾಂಕಕ್ಕೆ 7 ದಿನಗಳ ಮುಂಚಿತವಾಗಿ ಸದಸ್ಯತ್ವದ ದಾಖಲೆ ಹಾಗೂ ಅಂಕಪಟ್ಟಿ ಸಹಿತ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬಹುದು.

10. ಮರಣೋತ್ತರ ಪರಿಹಾರ ನಿಧಿಯನ್ನು ಸದಸ್ಯರು ಮರಣ ಹೊಂದಿದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಿದರೆ ಮಾತ್ರ ಈ ಪರಿಹಾರ ನಿಧಿಗೆ ವಾರಸುದಾರರು ಅರ್ಹರಾಗಿರುತ್ತಾರೆ.

11. ಸದಸ್ಯರುಗಳ ಠೇವಣಿಗಳ ಮೇಲೆ ನೀಡುವ ಬಡ್ಡಿಗೆ Sec.194A (3) (V) of Income Tax Act 1961 ಪ್ರಕಾರ T.D.S. ನಿಂದ ವಿನಾಯತಿ ಪಡೆಯಲು ಅರ್ಹ ಸದಸ್ಯರು/ಗ್ರಾಹಕರು ಆದಾಯ ತೆರಿಗೆ ಫಾರಂ 15ಜಿ/ಹೆಚ್ ನಲ್ಲಿ ಪಾನ್ ಸಂಖ್ಯೆಯನ್ನು ನಮೂದಿಸಿ ಬ್ಯಾಂಕಿನಲ್ಲಿ ಈ ಕೂಡಲೇ ಸಲ್ಲಿಸಲು ಕೋರಲಾಗಿದೆ. ಇದನ್ನು ಸಲ್ಲಿಸದಿದ್ದಲ್ಲಿ ವಾರ್ಷಿಕವಾಗಿ ಸಾಮಾನ್ಯರಿಗೆ ರೂ 40,000/– ಮತ್ತು ಹಿರಿಯ ನಾಗರೀಕರಿಗೆ ರೂ.50,000/–ಗಳ ಮೇಲ್ಪಟ್ಟು ಪಡೆಯುವ ಬಡ್ಡಿ ಮೇಲೆ ಶೇ.7.50 ರಂತೆ ಟಿ.ಡಿ.ಎಸ್. ಕಡಿತಗೊಳಿಸಲಾಗುವುದು. ರೂ.2,50,000/– ವರೆಗಿನ ಬಡ್ಡಿ ಆದಾಯಗಳಿಸುವಂತಹವರು 15G ಮತ್ತು 60 ವರ್ಷ ಮೇಲ್ಪಟ್ಟವರು ರೂ.3,00,000/– ವರೆಗಿನ ಬಡ್ಡಿ ಆದಾಯ ಗಳಿಸಿದಲ್ಲಿ 15H ಸಲ್ಲಿಸುವುದು. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಈ ಕೂಡಲೇ ಬ್ಯಾಂಕಿನ ಕೇಂದ್ರ ಕಛೇರಿ ಅಥವಾ ಶಾಖೆಗಳಲ್ಲಿ ಸಂಪರ್ಕಿಸಲು ಈ ಮೂಲಕ ವಿನಂತಿಸಲಾಗಿದೆ.

12. ಸದಸ್ಯರುಗಳು ಡಿವಿಡೆಂಡ್ ಅನ್ನು 3 ವರ್ಷಕ್ಕೂ ಮೇಲ್ಪಟ್ಟು (ಅವಧಿ ನಂತರವು) ಪಡೆಯದೆ ಇದ್ದಲ್ಲಿ ಡಿವಿಡೆಂಡ್ ಅನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು. ಆದುದರಿಂದ 2016–17ನೇ ಸಾಲಿನ ಡಿವಿಡೆಂಡನ್ನು ಇನ್ನೂ ಪಡೆದಿಲ್ಲದಿರುವಂತಹ ಸದಸ್ಯರು ದಿನಾಂಕ 23.12.2020 ರ ಒಳಗಾಗಿ ಪಡೆಯಬೇಕಾಗಿ ವಿನಂತಿ. ಈ ಅವಧಿ ನಂತರ ಡಿವಿಡೆಂಡನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು. 2016–17, 2017–18 ಮತ್ತು 2018–19ನೇ ಸಾಲಿನ ಡಿವಿಡೆಂಡ್ ಸದಸ್ಯರ ಉಳಿತಾಯ ಖಾತೆಗೆ ವರ್ಗಾಯಿಸಲಾಗಿದೆ. ಡಿವಿಡೆಂಡ್ ಜಮಾ ಆಗಿರದೇ ಇದ್ದಲ್ಲಿ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.

13. ಉಳಿತಾಯ ಖಾತೆಯನ್ನು ಹೊಂದಿಲ್ಲದ ಸದಸ್ಯರುಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆದರೆ, ಆಯಾ ವರ್ಷದ ಡಿವಿಡೆಂಡನ್ನು ಅವರವರ ಉಳಿತಾಯ ಖಾತೆಗಳಿಗೆ ವರ್ಗಾಯಿಸಲಾಗುವುದು. ಆದುದರಿಂದ ಉಳಿತಾಯ ಖಾತೆಯನ್ನು ತೆರೆಯಲು ಕೋರಲಾಗಿದೆ. ಬ್ಯಾಂಕು IFS Code ಪಡೆದಿದ್ದು IFS Code No. IBKL0008BCB ಆಗಿರುತ್ತದೆ. NEFT/RTGS ಸೌಲಭ್ಯ ಒದಗಿಸುತ್ತಿದೆ ಇದರಿಂದ ಬೇರೆ ಬ್ಯಾಂಕುಗಳ ಖಾತೆಗಳಿಂದ ಹಣವನ್ನು NEFT/RTGS ಮೂಲಕ ತಮ್ಮ ಖಾತೆಗಳಿಗೆ ವರ್ಗಾಯಿಸಬಹುದು ಮತ್ತು ತಮ್ಮ ಖಾತೆಗಳಿಂದ ಬೇರೆ ಬ್ಯಾಂಕುಗಳ ಖಾತೆಗಳಿಗೆ ಸಹ ವರ್ಗಾಯಿಸಬಹುದು, ಹಾಗೂ ಬೇರೆ ಬ್ಯಾಂಕುಗಳಲ್ಲಿ ನೆಟ್ ಬ್ಯಾಂಕಿಂಗ್ ಸೌಲಭ್ಯ ಹೊಂದಿದ್ದರೆ ಆ ಖಾತೆಗಳಿಂದ ತಮ್ಮ ಮೊಬೈಲ್ ಫೋನ್ ಮೂಲಕ ತಮ್ಮ ಖಾತೆಗಳಿಗೆ ಹಣವನ್ನು ವರ್ಗಾಯಿಸಬಹುದು. ಈ ಸೌಲಭ್ಯ ಪಡೆಯಲು ವಿನಂತಿ. ಉಳಿತಾಯ/ಚಾಲ್ತಿ ಖಾತೆಗಳಲ್ಲಿನ ವ್ಯವಹಾರಗಳಿಗೆ SMS Alert ಪಡೆಯಲು ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ಸಲ್ಲಿಸಬೇಕಾಗಿ ವಿನಂತಿ.

14. ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ಪ್ರತಿ ತಿಂಗಳು ನಿಗಧಿತ ಅವಧಿಯೊಳಗೆ ಮರುಪಾವತಿ ಮಾಡಿದ್ದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ. 1 ರಂತೆ ಬಡ್ಡಿ ರಿಯಾಯತಿ ನೀಡಲಾಗುವುದು. ಆಯಾ ಹಣಕಾಸು ವರ್ಷ ಪೂರ್ಣಗೊಂಡ ತಕ್ಷಣ ಈ ರಿಯಾಯಿತಿಯನ್ನು ಪಡೆಯಲು ಕೋರಿದೆ.

15. ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾನುಸಾರ 10 ವರ್ಷಕ್ಕೂ ಮೇಲ್ಪಟ್ಟ ಚಾಲ್ತಿಯಲ್ಲಿರದ ಎಲ್ಲಾ ತರಹದ ಠೇವಣಿ ಖಾತೆಗಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ವರ್ಗಾಯಿಸಬೇಕಾಗಿದ್ದು, ಸದಸ್ಯರು ಇದನ್ನು ಗಮನಿಸಿ ತಮ್ಮ ಠೇವಣಿ ಖಾತೆಗಳನ್ನು ಚಾಲ್ತಿ ಮಾಡುವಂತೆ ಮನವಿ ಮಾಡಿದೆ.

16. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ಕ್ಕೆ ಮಾಡಿರುವ ತಿದ್ದುಪಡಿಗಳಿಗನುಸಾರವಾಗಿ ಬ್ಯಾಂಕಿನ ಉಪನಿಬಂಧನೆಗಳಿಗೆ ಸಮಗ್ರ ತಿದ್ದುಪಡಿಯಾಗಿರುವುದರಿಂದ ಮುಂಬರುವ ಬ್ಯಾಂಕಿನ ಸರ್ವಸದಸ್ಯರ ಸಭೆಗಳಲ್ಲಿ ಸುಸ್ತಿದಾರರಲ್ಲದ ಸದಸ್ಯರು ಮತ ಚಲಾಯಿಸಲು ಉಪನಿಬಂಧನೆ 44ರ ರೀತಿ ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

**1) 3 ನಿರಂತರ ಸಹಕಾರ ವರ್ಷಗಳಲ್ಲಿ ಪ್ರತಿ ವರ್ಷ ಒಬ್ಬ ಸದಸ್ಯನು ಉಪನಿಬಂಧನೆ 20ರಲ್ಲಿ ನಿರ್ಧಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು.**

**(ಅ) ಸದಸ್ಯನು ಕನಿಷ್ಠ ಷೇರು ಮೊಬಲಗು ರೂ.500/– ಹೊಂದಿರತಕ್ಕದ್ದು.**

**(ಆ) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ರೂ.2.500/– ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ.**

**(ಇ) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು 2 ಇರತಕ್ಕದ್ದು**

**2) ಕಳೆದ 5 ಸಾಮಾನ್ಯ ಸಭೆಗಳ ಪೈಕಿ 3 ಸಾಮಾನ್ಯ ಸಭೆಗಳಿಗೆ ಹಾಜರಾಗತಕ್ಕದ್ದು.**

**ಮತ ಚಲಾಯಿಸಲು ಮೇಲೆ ತಿಳಿಸಿರುವ ಅರ್ಹತೆಗಳಲ್ಲಿ ಎಲ್ಲಾ ಅರ್ಹತೆಗಳನ್ನು ಪಾಲಿಸಿರಬೇಕು ಅದಕ್ಕೆ ತಪ್ಪಿದ್ದಲ್ಲಿ ಸದಸ್ಯರಿಗೆ ಮತ ಚಲಾಯಿಸುವ ಹಕ್ಕಿರುವುದಿಲ್ಲ.**

**ಮೇಲೆ ತಿಳಿಸಿರುವ ಅಂಶಗಳನ್ನು ತಾವು ಗಮನಿಸಿ ತಮ್ಮ ಮೂಲ ಷೇರು ಮೊಬಲಗು ರೂ.500/– ಕ್ಕಿಂತ ಕಡಿಮೆ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ತಕ್ಷಣ ಪಾವತಿಸಬೇಕೆಂದು ಹಾಗೂ ಕನಿಷ್ಠ ಸೇವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಮನವಿ ಮಾಡಿದೆ.**

ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕೇಂದ್ರ ಕಛೇರಿಯ ಷೇರು ವಿಭಾಗದಲ್ಲಿ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಮಾಹಿತಿ ಪಡೆಯಲು ವಿನಂತಿ.

ಬ್ಯಾಂಕಿನ ಎಲ್ಲಾ ನಿರ್ದೇಶಕರು ಮೇಲೆ ತಿಳಿಸಿರುವ ಬ್ಯಾಂಕಿನ ಸೇವೆಗಳನ್ನು ಬಳಸಿಕೊಂಡಿರುತ್ತಾರೆ.



# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಜಯನಗರ, ಬೆಂಗಳೂರು – 560 011

## ಬೈಲಾ ತಿದ್ದುಪಡಿಗಳು

| ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ಅನುಮೋದನೆಗಾಗಿ ಮಂಡಿಸಿರುವ ಉದ್ದೇಶಿತ ಬೈಲಾ ತಿದ್ದುಪಡಿ | ಬೈಲಾ ತಿದ್ದುಪಡಿಗೆ ಕಾರಣಗಳು |
|---|---|---|---|
| 4.<br>4.34 | ಪದಗಳ ಅರ್ಥ ವಿವರಣೆ:<br>ಹೊಸ ಸೇರ್ಪಡೆ | **4. ಪದಗಳ ಅರ್ಥ ವಿವರಣೆ:**<br>4.34"ವ್ಯವಸ್ಥಾಪನಾ ಮಂಡಳಿ" ಎಂದರೆ, ಬ್ಯಾಂಕಿನ ಆಡಳಿತ ನಿರ್ವಹಣಾ ನಿಕಾಯವಾಗಿದ್ದು, ಬ್ಯಾಂಕಿಂಗ್‌ನಲ್ಲಿ ವಿಶೇಷ ಜ್ಞಾನ ಹಾಗೂ ನುರಿತ ಅನುಭವಿಗಳನ್ನು ಒಳಗೊಂಡಿದ್ದು, ಮಂಡಳಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಸಹಕರಿಸುವುದು ಮತ್ತು ಬ್ಯಾಂಕಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ವೃತ್ತಿಪರವಾಗಿ ನಿರ್ವಹಿಸಲು ಹಾಗೂ ಕೇಂದ್ರೀಕೃತ ಗಮನ ಹರಿಸುವಂತೆ ಸುಗಮ ಮಾರ್ಗ ಮಾಡುವುದು ಎಂದಾಗಿದೆ. | ಆರ್.ಬಿ.ಐ ಸುತ್ತೋಲೆ ಸಂಖ್ಯೆ DoR (PCB.BPD Cir No.8/2.05.002/2019-20 ದಿನಾಂಕ: 31.12.2019 ರಂತೆ ವ್ಯವಸ್ಥಾಪನಾ ಮಂಡಳಿ ರಚನೆಗಾಗಿ |
| 50.<br>50.10 | ಮಂಡಳಿಯ ಸಭೆಗಳು:<br>ಮಂಡಳಿ ಮತ್ತು ಉಪಸಮಿತಿಗಳ ಸಭೆಗಳನ್ನು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿ ನಡೆಸತಕ್ಕದ್ದು. | **50. ಮಂಡಳಿಯ ಸಭೆಗಳು:**<br>50.10 ಆಡಳಿತ ಮಂಡಳಿ, ವ್ಯವಸ್ಥಾಪನಾ ಮಂಡಳಿ, ಹಾಗೂ ಉಪಸಮಿತಿಗಳ ಸಭೆಗಳು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿಯೆ ನಡೆಯತಕ್ಕದ್ದು. | |
| 58.<br>58.3 | ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:<br>(ಬಿ.ಜಿ) ನಂತರ ಹೊಸ ಸೇರ್ಪಡೆ | **58. ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:**<br>58.3 (ಬಿಹೆಚ್) ಸಾಮಾನ್ಯವಾಗಿ ಈ ಹಿಂದೆ ಹೇಳಿದವುಗಳಿಗೆ ಪೂರ್ವಾಗ್ರಹವಾಗದಂತೆ, ಅಂಥ ಅಧಿಕಾರಗಳು ಹಾಗೂ ಕರ್ತವ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು. | |
| 58.4<br>ಎ) | | 58.4ಎ) **ವ್ಯವಸ್ಥಾಪನಾ ಮಂಡಳಿ ರಚನೆ, ನೇಮಕಾತಿ ವಿಧಾನ ಮತ್ತು ಸದಸ್ಯರ ಅರ್ಹತೆಗಳು:**<br>i) ಆಡಳಿತ ಮಂಡಳಿಯು ವ್ಯವಸ್ಥಾಪನಾ ಮಂಡಳಿಗೆ ಸದಸ್ಯರುಗಳನ್ನು ನೇಮಕ ಮಾಡಲ್ಪಡಲು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿರುವ ನಮೂನೆ – II ರಲ್ಲಿ ವಾಗ್ದಾನ/ಮುಚ್ಚಳಿಕೆ ಸಮೇತ ಘೋಷಣಾ ಅರ್ಜಿಗಳನ್ನು ಪಡೆದುಕೊಂಡು ವಿವೇಚನಾಯುಕ್ತ ಪ್ರಕ್ರಿಯೆಯಿಂದ ಸದಸ್ಯರಾಗಬಯಸುವವರ ವಿದ್ಯಾರ್ಹತೆ, ಪರಿಣತಿ, ಹಿನ್ನಲೆಸಮಗ್ರತೆ, ದೂರದೃಷ್ಟಿ ಮತ್ತು "ಯೋಗ್ಯತೆಗೆ ತಕ್ಕ ಮಾನದಂಡ" ಗಳನ್ನು ಹೊಂದಿರುವ ವ್ಯಕ್ತಿಗಳನ್ನು ಪರಿಶೀಲಿಸಿ ಸದಸ್ಯರುಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.<br>ii) ವಿದ್ಯಾರ್ಹತೆ ಮಾನದಂಡಕ್ಕಾಗಿ ಈ ಕೆಳಗೆ ಹೇಳಿದವುಗಳ ಪೈಕಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ವಿಶೇಷ ಜ್ಞಾನ ಹಾಗೂ ನುರಿತ ಅನುಭವದ ಸೂಕ್ತತೆ ಹೊಂದಿರುವ ಐದು (5) ಸದಸ್ಯರನ್ನೊಳಗೊಂಡ ವ್ಯವಸ್ಥಾಪನಾ ಮಂಡಳಿ ಇರತಕ್ಕದ್ದು. | |

ಎ) ಲೆಕ್ಕಶಾಸ್ತ್ರ

ಬಿ) ಕೃಷಿ ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆ

ಸಿ) ಬ್ಯಾಂಕಿಂಗ್

ಡಿ) ಸಹಕಾರ

ಇ) ಅರ್ಥಶಾಸ್ತ್ರ

ಎಫ್) ಹಣಕಾಸು

ಜಿ) ಕಾನೂನು

ಹೆಚ್) ಸಣ್ಣ ಕೈಗಾರಿಕೆ

ಐ) ಮಾಹಿತಿ ತಂತ್ರಜ್ಞಾನ

ಜೆ) ಭಾರತೀಯ ರಿಸರ್ವ್ ಬ್ಯಾಂಕಿನ ಅಭಿಪ್ರಾಯದಂತೆ ಸಹಕಾರ ಬ್ಯಾಂಕುಗಳಿಗೆ ಉಪಯುಕ್ತವಾಗುವ ಇನ್ನಿತರೆ ವಿಶೇಷ ಜ್ಞಾನ.

ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು 35 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು 70ವರ್ಷ ಮೀರದ ವಯೋಮಿತನಾಗಿರುವವರಿಗೆ ಆದ್ಯತೆ.

iii) ತಕ್ಷಣದ ಅವಧಿಯ ಹಿಂದಿನ ಮೂರು ವರ್ಷಗಳಲ್ಲಿ ಬ್ಯಾಂಕಿನೊಂದಿಗೆ ವ್ಯವಹಾರಿಕ ಸಂಬಂಧ ಹೊಂದಿದ್ದ ಯಾವುದೇ ವ್ಯಕ್ತಿ ಸದಸ್ಯನಾಗಲು ಅರ್ಹನಾಗಿರತಕ್ಕುದಲ್ಲ. ಈ ಉದ್ದೇಶಕ್ಕಾಗಿ ಬ್ಯಾಂಕಿನೊಂದಿಗೆ ಠೇವಣಿ ಹೊಂದಿರುವ ವ್ಯಕ್ತಿಯನ್ನು ವ್ಯವಹಾರಿಕ ಸಂಬಂಧ ಹೊಂದಿದವನೆಂದು ವರ್ಗೀಕರಿಸುವಂತಿಲ್ಲ.

iv) ಮೇಲೆ ತಿಳಿಸಿದ ಮಾನದಂಡಗಳನ್ನು ಪೂರೈಸುತ್ತಿದ್ದಲ್ಲಿ ಶೇ 50ರಷ್ಟು ಮೀರದಂತೆ ವ್ಯವಸ್ಥಾಪನಾ ಮಂಡಳಿಗೆ ಕನಿಷ್ಠ ಮೂರು ಸದಸ್ಯರುಗಳನ್ನು ಆಡಳಿತ ಮಂಡಳಿ ಸದಸ್ಯರಿಂದ ಮತ್ತು ಇಬ್ಬರು ಸದಸ್ಯರುಗಳನ್ನು ಆಡಳಿತ ಮಂಡಳಿ ಸದಸ್ಯರಲ್ಲದವರನ್ನು ನೇಮಿಸಿಕೊಳ್ಳಬಹುದು.

v) ಆಡಳಿತ ಮಂಡಳಿಯಿಂದ ಪಡೆದುಕೊಂಡ ಸದಸ್ಯನನ್ನು ಹೊರತುಪಡಿಸಿ ವ್ಯವಸ್ಥಾಪನಾ ಮಂಡಳಿಯ ಸದಸ್ಯನ ಕಾರ್ಯವ್ಯಾಪ್ತಿಯು ಒಂದಕ್ಕೊಂದು ತಳುಕುಬಳುಕಾಗದಂತಹ ಒಂದಕ್ಕಿಂತ ಹೆಚ್ಚು ಗರಿಷ್ಠ ಮೂರು ಬ್ಯಾಂಕುಗಳ ವ್ಯವಸ್ಥಾಪನಾ ಮಂಡಳಿಯ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರುತ್ತಾನೆ.

vi) ಮುಖ್ಯ ಕಾರ್ಯನಿರ್ವಾಹಕನು ಮತದಾನದ ಹಕ್ಕಿಲ್ಲದ ಪದನಿಮಿತ್ತ ಸದಸ್ಯನಾಗಿರುತ್ತಾನೆ.

vii) ಕಾಯ್ದೆ ಹಾಗೂ ನಿಯಮಗಳಲ್ಲಿ ಆಡಳಿತ ಮಂಡಳಿ ಸದಸ್ಯನಿಗೆ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳು ವ್ಯವಸ್ಥಾಪನಾ ಮಂಡಳಿಯ ಸದಸ್ಯನಿಗೂ ಅನ್ವಯವಾಗುತ್ತವೆ.

viii) ವ್ಯವಸ್ಥಾಪನಾ ಮಂಡಳಿಯ ಅವಧಿಯು ಆಡಳಿತ ಮಂಡಳಿ ಅವಧಿಯೊಂದಿಗೆ ಜೊತೆಜೊತೆಯಾಗಿ ಮುಕ್ತಾಯವಾಗುತ್ತದೆ.

ix) ವ್ಯವಸ್ಥಾಪನಾ ಮಂಡಳಿಯ ಯಾವುದೇ ಸದಸ್ಯನು ರಿಸರ್ವ್ ಬ್ಯಾಂಕ್ ನಿರ್ದಿಷ್ಟಪಡಿಸಿದ ಮಾನದಂಡಗಳನ್ನು ಪೂರೈಸುತ್ತಿಲ್ಲದಿದ್ದಲ್ಲಿ, ಅಥವಾ ಬ್ಯಾಂಕಿನ ಹಿತಾಸಕ್ತಿಗೆ ಅಥವಾ ಠೇವುದಾರರಿಗೆ ಅಥವಾ ಇಬ್ಬರಿಗೂ ಮಾರಕವಾಗುವಂತೆ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂಥ ಸದಸ್ಯನನ್ನು ರಿಸರ್ವ್ ಬ್ಯಾಂಕು ವಜಾ ಮಾಡುವ ಅಧಿಕಾರ ಹೊಂದಿರತಕ್ಕದ್ದು.

| | | | |
|---|---|---|---|
| | | ವ್ಯವಸ್ಥಾಪನಾ ಮಂಡಳಿಯ ಯಾವುದೇ ಸದಸ್ಯನನ್ನು ವಜಾ ಮಾಡುವ ಪೂರ್ವದಲ್ಲಿ, ವ್ಯವಸ್ಥಾಪನಾ ಮಂಡಳಿಯ ಯಾವುದೇ ಸದಸ್ಯನು ನೀಡಿದ ರಾಜೀನಾಮೆ ಅಂಗೀಕರಿಸುವ ಪೂರ್ವದಲ್ಲಿ, ಆಡಳಿತ ಮಂಡಳಿಯು ರಿಸರ್ವ್ ಬ್ಯಾಂಕಿನ ಸಹಮತ ಪಡೆದುಕೊಳ್ಳತಕ್ಕದ್ದು. ವ್ಯವಸ್ಥಾಪನಾ ಮಂಡಳಿಯ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದಿದ್ದಲ್ಲಿ, ವ್ಯವಸ್ಥಾಪನಾ ಮಂಡಳಿಯನ್ನು ವಜಾ ಮಾಡುವ ಅಧಿಕಾರ ರಿಸರ್ವ್‌ಬ್ಯಾಂಕಿಗೆ ಇರತಕ್ಕದ್ದು, ವ್ಯವಸ್ಥಾಪನಾ ಮಂಡಳಿಯ ಸದಸ್ಯನನ್ನು ವಜಾ ಮಾಡಿದ ಅಥವಾ ವ್ಯವಸ್ಥಾಪನಾ ಮಂಡಳಿಯನ್ನು ಕಿತ್ತು ಹಾಕಿದ ನಂತರ ಆಡಳಿತ ಮಂಡಳಿಯು ಅಂತಹ ಯಾವುದೇ ಪ್ರಕರಣದಲ್ಲಿ ಮೂರು ತಿಂಗಳ ಅವಧಿಯೊಳಗಾಗಿ ಹೊಸ ಸದಸ್ಯನನ್ನು ನೇಮಕ ಮಾಡತಕ್ಕದ್ದು, ಅಥವಾ ಹೊಸ ವ್ಯವಸ್ಥಾಪನಾ ಮಂಡಳಿಯನ್ನು ರಚಿಸತಕ್ಕದ್ದು, ಮಧ್ಯಂತರ ವ್ಯವಸ್ಥೆಯಾಗಿ ಆಡಳಿತ ಮಂಡಳಿಯು ವ್ಯವಸ್ಥಾಪನಾ ಮಂಡಳಿಯ ಕಾರ್ಯಗಳನ್ನು ನಿರ್ವಹಿಸಬಹುದು. | |
| 58.4 ಬಿ) | | 58.4 ಬಿ) **ವ್ಯವಸ್ಥಾಪನಾ ಮಂಡಳಿಯ ಕಾರ್ಯಗಳು ಮತ್ತು ಅಧಿಕಾರಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು.**<br>i) ನಿರ್ದೇಶಕ ಮಂಡಳಿಯು ಅನುಮೋದಿಸಿರುವ ನೀತಿಗೆ ಅನುಗುಣವಾಗಿ ಸಾಲದ ಪ್ರಸ್ತಾಪಗಳನ್ನು ಪರಿಗಣಿಸುವುದು ಮತ್ತು ಸಾಲ ಸಮಿತಿ ಅಥವಾ ನಿರ್ದೇಶಕ ಮಂಡಳಿಗೆ ಅನುಮೋಧನೆಗೆ ಶಿಫಾರಸ್ಸು ಮಾಡುವುದು.<br>ii) ಅನುತ್ಪಾದಕ ಆಸ್ತಿಗಳ ವಸೂಲಾತಿಗೆ ಶಿಫಾರಸ್ಸು ಮಾಡುವುದು: ಏಕಕಾಲಿಕ ತಿರುವಳಿ ಅಥವಾ ರಾಜಿ ಸಂಧಾನದ ಮೂಲಕ.<br>iii) ನಿಧಿ ಮತ್ತು ಸಾಲಗಳ ನಿರ್ವಹಣೆ.<br>iv) ನಿರ್ದೇಶಕ ಮಂಡಳಿಯು ಅನುಮೋದಿಸಿರುವ ನೀತಿಗೆ ಅನುಗುಣವಾಗಿ ಹೂಡಿಕೆ ಪ್ರಸ್ತಾಪಗಳನ್ನು ಪರಿಗಣಿಸುವುದು ಮತ್ತು ಹೂಡಿಕೆ ಸಮಿತಿ ಅಥವಾ ನಿರ್ದೇಶಕ ಮಂಡಳಿಯ ಅನುಮೋಧನೆಗೆ ಶಿಫಾರಸ್ಸು ಮಾಡುವುದು.<br>v) ಉತ್ತಮ ಆಂತರಿಕ ನಿಯಂತ್ರಣ ಮತ್ತು ವ್ಯವಸ್ಥೆಯನ್ನು ಅಳವಡಿಸುವುದು ಮತ್ತು ಅಪಾಯ ನಿರ್ವಹಣಾ ನೀತಿಯ ಸಿದ್ಧತೆ/ಅನುಷ್ಠಾನ.<br>vi) ಗಣಕೀಕರಣ ಮತ್ತು ತಂತ್ರಜ್ಞಾನ ಅಳವಡಿಕೆ ಮತ್ತು ಈ ಕುರಿತ ಮೇಲ್ವಿಚಾರಣೆ.<br>vii) ಆಂತರಿಕ ಲೆಕ್ಕಪರಿಶೋಧನೆ ಮತ್ತು ತಪಾಸಣೆ ಕಾರ್ಯ ನೋಡಿಕೊಳ್ಳುವುದು ಮತ್ತು ಅನುಸರಣೆ/ಅನುಪಾಲನಾ ಕಾರ್ಯಗಳು.<br>viii) ಗ್ರಾಹಕರ ಸೇವೆ, ದೂರುಗಳ ನಿರ್ವಹಣೆ/ಕುಂದು ಕೊರತೆ ಪರಿಹಾರ.<br>ix) ಆಡಳಿತ ಮಂಡಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳಂತೆ ನೀತಿ/ನಿಯಮ ರೂಪಿಸಲು ಸಹಾಯ ಮಾಡುವುದು ಅದರಲ್ಲೂ ಪ್ರಮುಖವಾಗಿ ಸಾಲ ನಿಯಮಾವಳಿಗಳು, ಹೂಡಿಕೆ ನೀತಿ, ವಸೂಲಾತಿ ನಿಯಮಾವಳಿಗಳು ಆಸ್ತಿ-ಭಾದ್ಯತೆ ನಿರ್ವಹಣೆ, ಸಂಕಷ್ಟ ನಿರ್ವಹಣೆ ಇತ್ಯಾದಿ. | |

| | | | |
|---|---|---|---|
| | | x) ಆಡಳಿತ ಮಂಡಳಿಯಿಂದ ನಿಯೋಜಿಸಲಾದ ಇನ್ನಿತರ ಯಾವುದೇ ಜವಾಬ್ದಾರಿಗಳು.<br>ವ್ಯವಸ್ಥಾಪನಾ ಮಂಡಳಿಯ ಶಿಫಾರಸ್ಸು ಕುರಿತು ನಿರ್ದೇಶಕ ಮಂಡಳಿ ಭಿನ್ನಾಭಿಪ್ರಾಯ ಹೊಂದಿದ್ದ ಪಕ್ಷದಲ್ಲಿ, ಅದು ಈ ಕುರಿತು ಸಕಾರಣವನ್ನು ಲಿಖಿತವಾಗಿ ದಾಖಲಿಸುವ ಮೂಲಕ ಕ್ರಮ ಜರುಗಿಸಬಹುದಾಗಿದೆ. | |
| 58.4 ಸಿ) | | **58.4 ಸಿ) ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರ ಆಯ್ಕೆ ವಿಧಾನ ಮತ್ತು ಸಭೆಗಳು ಹಾಗೂ ಭತ್ಯೆಗಳು:-**<br>i) ವ್ಯವಸ್ಥಾಪನಾ ಮಂಡಳಿಯ ಚೇರಮನ್‌ನನ್ನು ಆಡಳಿತ ಮಂಡಳಿ ಅಥವಾ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಚೇರಮನ್ ಅನ್ನು ನೇಮಕ ಮಾಡಿಕೊಳ್ಳಬಹುದು. ಆದಾಗ್ಯೂ ಮಂಡಳಿಯ ಚೇರಮನ್ ಅನ್ನು ವ್ಯವಸ್ಥಾಪನಾ ಮಂಡಳಿಯ ಚೇರಮನ್‌ನನ್ನಾಗಿ ನೇಮಕ ಮಾಡತಕ್ಕದ್ದಲ್ಲ. ಸಭೆಗೆ ಚೇರಮನ್ ಗೈರುಹಾಜರಿದ್ದಲ್ಲಿ ವ್ಯವಸ್ಥಾಪನಾ ಮಂಡಲಿಯ ಸದಸ್ಯರು ತಮ್ಮೊಳಗೆ ಒಬ್ಬರನ್ನು ಸಭೆಯ ಚೇರಮನ್ ಆಗಿ ಆಯ್ಕೆ ಮಾಡಿಕೊಳ್ಳಬಹುದು.<br>ii) ವ್ಯವಸ್ಥಾಪನಾ ಮಂಡಳಿಯು ಬ್ಯಾಂಕಿನ ವ್ಯವಹಾರಗಳನ್ನು ನಿರ್ವಹಿಸಲು ಅಗತ್ಯವಿದ್ದಾಗ, ಯಾವಾಗಲಾದರೂ ಸಭೆ ಸೇರಬಹುದು. ಆದರೆ, ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು. ಸಭೆಯ ಯಥಾವತ್ ನಡುವಳಿಕೆಗಳ ದಾಖಲೆಯನ್ನು ನಿರ್ವಹಿಸತಕ್ಕದ್ದು, ಮತ್ತು ಅದನ್ನು ಮಂಡಳಿಯ ಸಭೆಗೆ ಮಂಡಿಸತಕ್ಕದ್ದು.<br>iii) ವ್ಯವಸ್ಥಾಪನಾ ಮಂಡಳಿಯ ಒಟ್ಟು ಸದಸ್ಯರ ಪೈಕಿ 2/3 ಸದಸ್ಯರು ಸಭೆಯ ಅಗತ್ಯ ಸಂಖ್ಯಾಬಲ (ಕೋರಂ) ಆಗಿರತಕ್ಕದ್ದು.<br>iv) ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸೇವೆಗಾಗಿ ಆಡಳಿತ ಮಂಡಳಿ ಸದಸ್ಯರಿಗೆ ಕಾಲಕಾಲಕ್ಕೆ ನೀಡುವ ಭತ್ಯೆ/ಸಭಾಭತ್ಯೆಗಳನ್ನು ಪಾವತಿಸಬಹುದು.<br>v) ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸೇವೆಗಾಗಿ ಸಹಕಾರ ಬ್ಯಾಂಕುಗಳ ಉಪವಿಧಿಗಳಲ್ಲಿ ನಿಗದಿಪಡಿಸಲಾದ ಅಥವಾ ನಿರ್ದೇಶಕ ಮಂಡಳಿಯು ಅನುಮೋಧನೆ ನೀಡಿರುವ ಸಭಾಭತ್ಯೆ/ಇತರೆ ಭತ್ಯೆಗಳನ್ನು ಪಾವತಿಸಬಹುದಾಗಿದೆ. | |
| 58.4 ಡಿ) | | **58.4 ಡಿ) ಭಾರತೀಯ ರಿಸರ್ವ್ ಬ್ಯಾಂಕಿಗೆ ವರದಿ:-**<br>ಈ ಸಂಬಂಧ ಈ ಬ್ಯಾಂಕು ಅಂಥ ನೇಮಕ ಹೊಂದಿದ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಮಾಹಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಛೇರಿಗಳ ಮೇಲ್ವಿಚಾರಣಾ ವಿಭಾಗಕ್ಕೆ ಮಾಹಿತಿಗಾಗಿ ಮತ್ತು ದಾಖಲೆಗಾಗಿ ಸಲ್ಲಿಸಬೇಕು. ಇದಲ್ಲದೆ, ಪ್ರತಿ ವರ್ಷ ಡಿಸೆಂಬರ್ 31ಕ್ಕೆ ನಿಗದಿತ ಅವಧಿಯು ಪೂರ್ಣಗೊಂಡ 15 ದಿನಗಳೊಳಗೆ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಛೇರಿಗೆ ಅನುಬಂಧ 3 ರಂತೆ ಸಲ್ಲಿಸಬೇಕು. | |
| 63.4) | **ಮುಖ್ಯ ಕಾರ್ಯ ನಿರ್ವಾಹಕನ ನೇಮಕಾತಿ;**<br>ಮುಖ್ಯ ಕಾರ್ಯನಿರ್ವಾಹಕನು ಅಂಗೀಕೃತ ವಿಶ್ವವಿದ್ಯಾಲಯದ | **63.4) ಮುಖ್ಯ ಕಾರ್ಯನಿರ್ವಾಹಕನ ನೇಮಕಾತಿ:**<br>ಎ) ಮುಖ್ಯಕಾರ್ಯನಿರ್ವಾಹಕನು ಕಲಂ 29 ಜಿ ಪ್ರಕಾರ ಹಾಗೂ ಮಹಾಸಭೆ ಹಾಗೂ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದು ಮಂಡಳಿಯಿಂದ ನೇಮಿಸಲ್ಪಟ್ಟ ಮುಖ್ಯ ಕಾರ್ಯನಿರ್ವಾಹಕ ಮತ್ತು ಮುಖ್ಯ ಆಡಳಿತಾತ್ಮಕ | |

<table>
<tr><td></td><td>ಪದವಿ ಪಡೆದಿರುವಂತವನಾಗಿದ್ದು ಕಾಯ್ದೆಯ ಕಲಂ 29 ಬಿ ಪ್ರಕಾರ ಮಂಡಳಿಯಿಂದ ನೇಮಕವಾದ ಪೂರ್ಣಾವಧಿಯ ವೇತನ ಪಡೆಯುವ ಬ್ಯಾಂಕಿನ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಮತ್ತು ಮುಖ್ಯ ಆಡಳಿತಾಧಿಕಾರಿಯಾಗಿರತಕ್ಕದ್ದು, ಮಂಡಳಿಯು ಆಗಿಂದಾಗ್ಗೆ ವಹಿಸುವ ಕರ್ತವ್ಯಗಳ ಜೊತೆಗೆ, ಆತನ ಕರ್ತವ್ಯ ಮತ್ತು ಅಧಿಕಾರಗಳು ಈ ಕೆಳಗಿನಂತೆ ಇರತಕ್ಕದ್ದು.</td><td>ಅಧಿಕಾರಿಯಾಗಿರತಕ್ಕದ್ದು, ರಿಸರ್ವ್ ಬ್ಯಾಂಕಿನಿಂದ ಅಂಥ ಅನುಮತಿಯನ್ನು ಪ್ರಸ್ತುತ ಮುಖ್ಯ ಕಾರ್ಯನಿರ್ವಾಹಕನ ಅವಧಿಯು ಮುಕ್ತಾಯವಾಗುವ ಕನಿಷ್ಠ ಮೂರು ತಿಂಗಳ ಮೊದಲು ಕೋರತಕ್ಕದ್ದು, ಅವನು ಇವುಗಳ ಸಮೇತ ಪದವೀಧರನಾಗಿರತಕ್ಕದ್ದು.<br>ಬಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಿಸಿಕೊಳ್ಳಲು ಆಡಳಿತ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿರುವ ನಮೂನೆ-II ರಲ್ಲಿ ವಾಗ್ದಾನ/ಮುಚ್ಚಳಿಕೆ ಸಮೇತ ಘೋಷಣಾ ಅರ್ಜಿಗಳ ದಾಖಲೆಗಳೊಂದಿಗೆ ಪಡೆದುಕೊಂಡು ದಾಖಲೆಪಟ್ಟಿಯಲ್ಲಿನ ದಾಖಲೆಗಳೊಂದಿಗೆ ವಿವೇಚನಾಯುಕ್ತ ಪ್ರಕ್ರಿಯೆಯಿಂದ ಅರ್ಜಿದಾರರ ವಿದ್ಯಾರ್ಹತೆ, ಪರಿಣಿತಿ, ಅನುಭವವನ್ನು "ಅರ್ಹತೆ ಮತ್ತು ಯೋಗ್ಯತೆ" ಅಳತೆಗೋಲುಗಳನ್ನು ಪೂರೈಸಿದಲ್ಲಿ ಹಾಗೂ ಈ ಕೆಳಗಿನ ವಿದ್ಯಾರ್ಹತೆಗಳನ್ನು ಹೊಂದಿದ್ದಲ್ಲಿ ಆಯ್ಕೆ ಮಾಡಿಕೊಳ್ಳತಕ್ಕದ್ದು.<br>i) ಸಿಎಐಐಬಿ/ಡಿಬಿಎಫ್/ಡಿಪ್ಲೋಮಾ ಇನ್ ಕೋ ಆಪರೇಟಿವ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (CAIIB/DBF/Diploma in Co.operative Business Management) ಅಥವಾ ತತ್ಸಮಾನ ಅರ್ಹತೆ; ಅಥವಾ<br>ii) ಚಾರ್ಟಡ್/ಕಾಸ್ಟ್ ಅಕೌಂಟೆಂಟ್;<br>iii) ನೇಮಕಾತಿ ಸಂದರ್ಭದಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಹಂತದಲ್ಲಿ ಕನಿಷ್ಠ ಎಂಟು ವರ್ಷಗಳ ಸೇವಾ ಅನುಭವ ಇರತಕ್ಕದ್ದು.<br>iv) ಯಾವುದೇ ಸ್ನಾತಕೋತ್ತರ ಪದವಿ, 35 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು 60 ವರ್ಷ ಮೀರದ ವಯೋಮಿತಿಯವನಾಗಿರತಕ್ಕದ್ದು,<br>v) ಮುಖ್ಯ ಕಾರ್ಯನಿರ್ವಾಹಕನು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಅಳತೆಗೋಲು (ಮಾನದಂಡ) ಪೂರೈಸದಿದ್ದಲ್ಲಿ, ಬ್ಯಾಂಕಿನ ಹಿತಾಸಕ್ತಿಗೆ ಅಥವಾ ಠೇವಣಿದಾರರಿಗೆ ಅಥವಾ ಇಬ್ಬರಿಗೂ ಮಾರಕವಾಗುವ ರೀತಿಯಲ್ಲಿ ವರ್ತಿಸುತ್ತಿದ್ದಲ್ಲಿ ಅವನನ್ನು ತೆಗೆದುಹಾಕುವ (ವಜಾ ಮಾಡುವ) ಅಧಿಕಾರ ರಿಸರ್ವ್ ಬ್ಯಾಂಕಿಗೆ ಇರತಕ್ಕದ್ದು, ಹಾಗೆಯೇ ಮುಖ್ಯ ಕಾರ್ಯನಿರ್ವಾಹಕನನ್ನು ತೆಗೆದುಹಾಕಿದ/ವಜಾ ಮಾಡಿದ ಮೂರು ತಿಂಗಳ ಒಳಗಾಗಿ ಹೊಸ ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕಾತಿ ಮಾಡತಕ್ಕದ್ದು.</td><td></td></tr>
<tr><td>62</td><td></td><td>62 ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು:<br>ಮಂಡಳಿಯು ಮುಖ್ಯಕಾರ್ಯನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ/ನೀಡಿದ ಅಧಿಕಾರಿಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು; ಅವನು,</td><td></td></tr>
</table>

| | | | |
|---|---|---|---|
| 62.9) | ಸಾಮಾನ್ಯ ನಿಕಾಯದ, ಮಂಡಳಿಯ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು, ಸದರಿ ಸಭೆಗಳಲ್ಲಿ ಅಗತ್ಯಪಡಿಸುವ ಕಾಗದಪತ್ರಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಸಭಾಪತಿಯೊಡನೆ ಅಂತಹ ಸಭೆಗಳ ನಡೆವಳಿಗಳಿಗೆ ಸಹಿ ಮಾಡತಕ್ಕದ್ದು; | 62.9)ಸರ್ವಸಾಧಾರಣ ಮಂಡಳಿಯ, ವ್ಯವಸ್ಥಾಪನಾ ಮಂಡಳಿಯ ಮತ್ತು ಉಪಸಮಿತಿಯ ಎಲ್ಲಾ ಸಭೆಗಳಿಗೆ ಹಾಜರಿರತಕ್ಕದ್ದು, ಹಾಗೂ ಅಂಥ ಸಭೆಗಳಿಗೆ ಅಗತ್ಯವಿರುವ ಎಲ್ಲಾ ಕಾಗದ ಪತ್ರಗಳನ್ನು ಹಾಗೂ ಮಾಹಿತಿಯನ್ನು ಹಾಜರುಪಡಿಸತಕ್ಕದ್ದು, ಮತ್ತು ಚೇರ್ಮನ್‌ರೊಂದಿಗೆ ಅಂಥ ಸಭೆಯ ನಡುವಳಿಗಳಿಗೆ ಸಹಿ ಮಾಡತಕ್ಕದ್ದು; | |
| 62.46) | ಬ್ಯಾಂಕಿನ ನೀತಿಗಳ, ಉದ್ದೇಶಗಳ ಮತ್ತು ಯೋಜನೆಯ ರಚನೆಯಲ್ಲಿ ಮಂಡಳಿಗೆ ಅಗತ್ಯ ನೆರವು ನೀಡುವುದು; | 62.46) ಬ್ಯಾಂಕಿನ ನೀತಿಗಳನ್ನು, ಉದ್ದೇಶಗಳನ್ನು ಹಾಗೂ ಯೋಜನೆ ರೂಪಿಸಲು ಮಂಡಳಿ ಹಾಗೂ ವ್ಯವಸ್ಥಾಪನಾ ಮಂಡಳಿಗೆ ಸಹಕರಿಸತಕ್ಕದ್ದು; | |
| 62.48) | ಹೊಸ ಸೇರ್ಪಡೆ | 62.48)ಮಂಡಳಿಯು ಕಾರ್ಯ, ನಿಯಮ ಹಾಗೂ ಉಪನಿಯಮಗಳಿಗೆ ವಿರುದ್ಧ ಕೈಗೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದಲ್ಲ ಹಾಗೂ ಈ ಬಗ್ಗೆ ನಿಬಂಧಕರಿಗೆ ವರದಿ ಮಾಡತಕ್ಕದ್ದು | |

## ಹಾಲಿ ವಿವಿಧ ಸಾಲಗಳ ಗರಿಷ್ಠ ಮಿತಿ ಮತ್ತು ಬಡ್ಡಿದರ ಕೆಳಕಂಡಂತಿರುತ್ತದೆ

| ಕ್ರ. ಸಂ. | ಸಾಲದ ವಿಧಗಳು | ಸಾಲದ ಮೊತ್ತ | ಬಡ್ಡಿದರ |
|---|---|---|---|
| 1 | ಆಧಾರವಿಲ್ಲದ ಸಾಲಗಳು | ಗರಿಷ್ಠ ರೂ 2 ಲಕ್ಷಗಳು | ಶೇ. 13 |
| 2 | ಆಭರಣ ಸಾಲಗಳು | ಕನಿಷ್ಠ ರೂ. 10,000/-<br>ಗರಿಷ್ಠ ರೂ. 10 ಲಕ್ಷಗಳು<br>ರೂ. 2 ಲಕ್ಷಗಳವರೆಗೆ<br>ರೂ. 2 ಲಕ್ಷಗಳ ಮೇಲ್ಪಟ್ಟು ರೂ. 10 ಲಕ್ಷಗಳವರೆಗೆ | ಶೇ. 10<br>ಶೇ. 11 |
| 3 | ವಾಹನ ಸಾಲಗಳು | ಗರಿಷ್ಠ ರೂ. 40 ಲಕ್ಷಗಳು | ಶೇ. 10 |
| 4 | ಓವರ್ ಡ್ರಾಫ್ಟ್ - ಸ್ವತ್ತಿನ ಮೇಲೆ | ಗರಿಷ್ಠ ರೂ. 2 ಕೋಟಿ | ಶೇ. 13.50 |
| 5 | ಓವರ್ ಡ್ರಾಫ್ಟ್ – ಠೇವಣಿಗಳ ಮೇಲೆ | ಠೇವಣಿ ಮೊತ್ತದ ಮೇಲೆ ಶೇ. 90 ರಷ್ಟು | ಠೇವಣಿ ಬಡ್ಡಿದರದ ಮೇಲೆ ಶೇ. 2ರಷ್ಟು ಹೆಚ್ಚಿಗೆ |
| 6 | 1) ವ್ಯಾಪಾರ ಅಭಿವೃದ್ಧಿ ಸಾಲಗಳು<br>2) ವಾಣಿಜ್ಯ ಸಂಕೀರ್ಣ ಕಟ್ಟಲು<br>( for group borrowers) | ಗರಿಷ್ಠ ರೂ. 3 ಕೋಟಿಗಳು<br>ಗರಿಷ್ಠ ರೂ. 5 ಕೋಟಿಗಳು | ಶೇ. 12 |
| 7 | ಮನೆ ಕಟ್ಟಲು ಮತ್ತು ಮನೆ ಕೊಳ್ಳಲು, ನಿವೇಶನ ಕೊಳ್ಳಲು ಜೊತೆಗೆ ಕಟ್ಟಡ ಕಟ್ಟಲು | ಗರಿಷ್ಠ ರೂ. 70 ಲಕ್ಷಗಳು | ಶೇ. 10 |
| 8 | ನಿವೇಶನ ಕೊಳ್ಳಲು | ಗರಿಷ್ಠ ರೂ 40 ಲಕ್ಷಗಳು | ಶೇ. 11 |
| 9 | ಸಾಲ ತೀರಿಸಲು | ಗರಿಷ್ಠ ರೂ. 70 ಲಕ್ಷಗಳು | ಶೇ. 13.50 |
| 10 | ಮದುವೆ ಉದ್ದೇಶಕ್ಕೆ | ಗರಿಷ್ಠ ರೂ. 25 ಲಕ್ಷಗಳು | ಶೇ. 12.50 |
| 11 | ರಿಪೇರಿ ಮತ್ತು ನವೀಕರಣಕ್ಕೆ | ಗರಿಷ್ಠ ರೂ. 5 ಲಕ್ಷಗಳು | ಶೇ. 12.50 |
| 12 | ವಿದ್ಯಾಭ್ಯಾಸಕ್ಕಾಗಿ | ಗರಿಷ್ಠ ರೂ 15 ಲಕ್ಷಗಳು<br>ರೂ. 5 ಲಕ್ಷಗಳವರೆಗೆ<br>ರೂ. 5 ಲಕ್ಷಗಳ ಮೇಲ್ಪಟ್ಟು ಮತ್ತು<br>ರೂ. 15 ಲಕ್ಷಗಳವರೆಗೆ | ಶೇ. 10<br>ಶೇ. 11 |
| 13 | ಸ್ವತ್ತಿನ ಮೇಲಿನ ಬಾಡಿಗೆ ರಿಯಾಯಿತಿ ಸಾಲಗಳು | ಗರಿಷ್ಠ ರೂ 3 ಕೋಟಿಗಳವರೆಗೆ | ಶೇ. 11 |

# ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು – 560 011

**ಸಹಕಾರ ರತ್ನ ಶ್ರೀ ಬಿ. ಎಲ್. ಲಕ್ಕೇಗೌಡ**

ಸಂಸ್ಥಾಪಕರು

**2019–20 ನೇ ಸಾಲಿನ ಆಡಳಿತ ಮಂಡಳಿ**

**ಡಾ: ಎಂ.ಪಿ. ಜಗತ್**
ಅಧ್ಯಕ್ಷರು

**ಡಾ: ಎಂ. ವೀರಪ್ಪ**
ಉಪಾಧ್ಯಕ್ಷರು

**ಆಡಳಿತ ಮಂಡಳಿಯ ಸದಸ್ಯರು**

ಶ್ರೀ ಕೆ. ಎಲ್. ಗಂಗಾಧರಗೌಡ
ಶ್ರೀ ಜೆ. ಎಂ. ಜಯಪ್ರಕಾಶ್ (ಜೆ.ಪಿ.)
ಶ್ರೀ ಪಿ. ನರಸಿಂಹಮೂರ್ತಿ
ಶ್ರೀ ಜಿ. ಎನ್. ಆರ್. ಮೋಹನ
ಶ್ರೀ ಎಂ. ರಾಮಕೃಷ್ಣ
ಶ್ರೀ ಹೆಚ್. ಪಿಳ್ಳಾಂಜನಪ್ಪ
ಶ್ರೀ ಟಿ. ರವಿಶಂಕರ್
ಶ್ರೀ ಬಿ. ಎನ್. ಲೋಕೇಶ್

ಶ್ರೀ ಎಂ. ರಾಜಶೇಖರ ರೆಡ್ಡಿ
ಶ್ರೀ ಕೆ. ಎಸ್. ಸುಧಾಕರ್
ಶ್ರೀ ಎಸ್. ಬಸವರಾಜಪ್ಪ
ಶ್ರೀ ಕೆ. ಎಸ್. ನಂಜುಂಡೇಗೌಡ
ಶ್ರೀ ವಿ. ಶ್ರೀನಿವಾಸಯ್ಯ
ಡಾ|| ಮಹೇಶ್ ಅರವಿಂದ್
ಶ್ರೀಮತಿ ಬಿ. ಎಲ್. ನಂದಿನಿ

ಶ್ರೀಮತಿ ಡಿ. ಎ. ಅಮೃತ
ಕಾರ್ಯದರ್ಶಿ

ತೆರೆದ ಅಂಚೆ

"Permitted to post on pre-payment of postage in cash at Business Post Center, Basavanagudi, Bengaluru - 560 004 License No.KN/BGR/Notices/34069/2020/1.12.2020 to 4.12.2020 Postage Rs.4/- (Rupees Four only)

ಗೆ,
ಶ್ರೀಮತಿ/ಶ್ರೀ

ಮೇಲಿನ ವಿಳಾಸಕ್ಕೆ ತಲುಪದಿದ್ದರೆ ದಯವಿಟ್ಟು
**ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.**
ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ,
ಜಯನಗರ, ಬೆಂಗಳೂರು – 560 011 ಕ್ಕೆ ವಾಪಸ್ಸು ಕಳುಹಿಸುವುದು